**All India Radio: Bangalore**
**National Bulletin In Kannada**
**10.11.2026 07.35 a.m.**
**ಆಕಾಶವಾಣಿ, ಬೆಂಗಳೂರು**
**ರಾಷ್ಟ್ರೀಯ ವಾರ್ತೆಗಳು**
**10.11.2026 07.35 a.m.**
**<><><><>**

ಮುಖ್ಯಾಂಶಗಳು

1. ಉಕ್ರೇನ್ ಅಧ್ಯಕ್ಷರೊಂದಿಗೆ ಪ್ರಧಾನಿ ನರೇಂದ್ರ ಮೋದಿ ದೂರವಾಣಿ ಸಂಭಾಷಣೆ; ರಷ್ಯಾದೊಂದಿಗಿನ ಬಿಕ್ಕಟ್ಟಿಗೆ ರಾಜತಾಂತ್ರಿಕ ಮಾರ್ಗದ ಪರಿಹಾರಕ್ಕೆ ಕರೆ
2. ಅಬುಧಾಬಿಯಲ್ಲಿ ಇಂದಿನಿಂದ ರಷ್ಯಾ, ಉಕ್ರೇನ್ ಮತ್ತು ಅಮೆರಿಕದ ಪ್ರತಿನಿಧಿಗಳ ಎರಡು ದಿನಗಳ ಮಾತುಕತೆ
3. ನವದೆಹಲಿಯಲ್ಲಿ ಭಾರತ-ಲೆಬನಾನ್ ನಡುವಿನ ಮೊದಲ ವಿದೇಶಾಂಗ ಕಚೇರಿ ಮಟ್ಟದ ಸಮಾಲೋಚನೆ ಸಂಪನ್ನ
4. ಭಾರತ - ನ್ಯೂಜಿಲ್ಯಾಂಡ್ ಅಂತಾರಾಷ್ಟ್ರೀಯ ಏಕದಿನ ಕ್ರಿಕೆಟ್; ಹ್ಯಾಮಿಲ್‌ಟನ್‌ನಲ್ಲಿಂದು ಮೂರನೇ ಪಂದ್ಯ

<><><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನಿನ್ನೆ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಉಕ್ರೇನ್‌ನಲ್ಲಿ ಮುಂದುವರಿದಿರುವ ಸಂಘರ್ಷಕ್ಕೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳ ಕುರಿತು ಅಧ್ಯಕ್ಷ ಝೆಲೆನ್ಸ್ಕಿ ತಮ್ಮ ಅಭಿಪ್ರಾಯ ಹಂಚಿಕೊಂಡರು. ಸಂಘರ್ಷಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕು ಎಂಬ ಭಾರತದ ನಿರಂತರ ನಿಲುವನ್ನು ಪ್ರಧಾನಿ ನರೇಂದ್ರ ಮೋದಿ ಪುನರುಚ್ಚರಿಸಿದರು. ಸಂಘರ್ಷವನ್ನು ಶಾಂತಿಯುತವಾಗಿ ಬಗೆಹರಿಸುವ ಎಲ್ಲ ಪ್ರಯತ್ನಗಳಿಗೆ ಭಾರತ ಸಹಕಾರ ನೀಡಲು ಸಿದ್ಧವಿದೆ ಎಂದು ಅವರು ತಿಳಿಸಿದರು. ಇದೇ ವೇಳೆ, ಎರಡೂ ದೇಶಗಳ ಜನರ ಪರಸ್ಪರ ಹಿತದೃಷ್ಟಿಯಿಂದ ವಿವಿಧ ಕ್ಷೇತ್ರಗಳಲ್ಲಿ ಭಾರತ-ಉಕ್ರೇನ್ ದ್ವಿಪಕ್ಷೀಯ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಕ್ರಮಗಳ ಬಗ್ಗೆಯೂ ಉಭಯ ನಾಯಕರು ಚರ್ಚಿಸಿದರು.

<><><><>

ಇರಾನ್‌ನಲ್ಲಿನ ಯುದ್ಧ, ಮಿಲಿಟರಿ ದೃಷ್ಟಿಯಿಂದ ಬಹುತೇಕ ಮುಗಿದಿದೆ ಎಂದು ನಂಬುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್ ರೆಹಮಾನ್ ಬಿನ್ ಜಾಸ್ಸಿಮ್ ಅಲ್ ಥಾನಿ ಅವರನ್ನು ನಿನ್ನೆ ಭೇಟಿಯಾದ ನಂತರ, ಈ ಕುರಿತು ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಇರಾನ್‌ನ ಶಕ್ತಿಯನ್ನು ಕುಂದಿಸಲಾಗಿದೆ ಎಂದ ಅವರು, ಇರಾನ್‌ನ ಪರಮಾಣು ಕಾರ್ಯಕ್ರಮ ಮತ್ತೆ ಅಪಾಯಕಾರಿಯಾಗದಂತೆ ತಡೆಯಲು ದೀರ್ಘಕಾಲೀನ ಪರಿಹಾರವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.

<><><><>

ಉಕ್ರೇನ್‌ನಲ್ಲಿ ಸುಮಾರು ಐದು ವರ್ಷಗಳಿಂದ ನಡೆಯುತ್ತಿರುವ ಸಂಘರ್ಷಕ್ಕೆ ಅಂತ್ಯ ಹಾಡುವ ಉದ್ದೇಶದಿಂದ ರಷ್ಯಾ, ಉಕ್ರೇನ್ ಮತ್ತು ಅಮೆರಿಕದ ಪ್ರತಿನಿಧಿಗಳು ಇಂದಿನಿಂದ ಅಬುಧಾಬಿಯಲ್ಲಿ ಎರಡು ದಿನಗಳ ಮಾತುಕತೆ ನಡೆಸಲಿದ್ದಾರೆ.

ಫೆಬ್ರವರಿ ತಿಂಗಳ ನಂತರ ಮೂರು ರಾಷ್ಟ್ರಗಳ ಪ್ರತಿನಿಧಿಗಳು ಮೊದಲ ಬಾರಿಗೆ ಸಭೆ ಸೇರಲಿದ್ದಾರೆ. ಉಭಯ ದೇಶಗಳ ನಡುವೆ ಮುಂದುವರಿದಿರುವ ಸಂಘರ್ಷ ಹಾಗೂ ಕ್ಷಿಪಣಿ ಮತ್ತು ಡ್ರೋನ್ ದಾಳಿಗಳ ತೀವ್ರತೆಯ ಹಿನ್ನೆಲೆಯಲ್ಲಿ, ಭದ್ರತಾ ಖಾತರಿಗಳ ವಿಷಯ, ಮಾತುಕತೆಯಲ್ಲಿ ಪ್ರಮುಖವಾಗಿ ಚರ್ಚೆಯಾಗುವ ನಿರೀಕ್ಷೆಯಿದೆ. ಉಕ್ರೇನ್ ತನ್ನ ಕೆಲವು ಪ್ರದೇಶಗಳನ್ನು ಬಿಟ್ಟುಕೊಡಬೇಕು ಮತ್ತು ನ್ಯಾಟೋ ಸದಸ್ಯತ್ವದ ಬೇಡಿಕೆಯನ್ನು ಕೈಬಿಡಬೇಕು ಎಂದು ರಷ್ಯಾ ಒತ್ತಾಯಿಸುತ್ತಿದೆ. ಆದರೆ, ಈ ಷರತ್ತುಗಳನ್ನು ತಿರಸ್ಕರಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ, ಕದನ ವಿರಾಮ ಮತ್ತು ಭವಿಷ್ಯದ ದಾಳಿಗಳನ್ನು ತಡೆಯಲು ದೃಢವಾದ ಭದ್ರತಾ ಖಾತರಿಗಳನ್ನು ಆಗ್ರಹಿಸಿದ್ದಾರೆ. ಎಲ್ಲ ಪಕ್ಷಗಳ ಭದ್ರತಾ ಕಳವಳಗಳಿಗೆ ಪರಿಹಾರ ಕಂಡುಕೊಳ್ಳುವ ಪ್ರಾಯೋಗಿಕ ವ್ಯವಸ್ಥೆ ರೂಪಿಸಲು ಅಮೆರಿಕ ಪ್ರಯತ್ನಿಸುತ್ತಿದೆ. ಇದೇ ವೇಳೆ, ಮಾತುಕತೆಯಲ್ಲಿ ಯುರೋಪ್ ರಾಷ್ಟ್ರಗಳ ಪಾಲ್ಗೊಳ್ಳುವಿಕೆ ವಿವಾದದ ವಿಷಯವಾಗಿದ್ದು, ಸದ್ಯಕ್ಕೆ ಅವುಗಳ ಭಾಗವಹಿಸುವಿಕೆಗೆ ರಷ್ಯಾ ವಿರೋಧ ವ್ಯಕ್ತಪಡಿಸಿದೆ.

<><><><>

ವಿದೇಶಾಂಗ ವ್ಯವಹಾರಗಳ ಸಚಿವ ಡಾ. ಎಸ್. ಜೈಶಂಕರ್ ನಿನ್ನೆ ರಷ್ಯಾ ವಿದೇಶಾಂಗ ಸಚಿವ ಸೆರ್ಗೆ ಲಾವ್ರೊವ್ ಅವರೊಂದಿಗೆ ದೂರವಾಣಿ ಮೂಲಕ ಮಾತನಾಡಿದರು. ಸಾಮಾಜಿಕ ಜಾಲತಾಣದಲ್ಲಿ ಈ ಕುರಿತು ಮಾಹಿತಿ ಹಂಚಿಕೊಂಡಿರುವ ಸಚಿವ ಡಾ. ಜೈಶಂಕರ್, ತಮ್ಮ ಮಾತುಕತೆ, ಉಕ್ರೇನ್ ಸಂಘರ್ಷ ಮತ್ತು ನಡೆಯುತ್ತಿರುವ ರಾಜತಾಂತ್ರಿಕ ಉಪಕ್ರಮಗಳ ಮೇಲೆ ಕೇಂದ್ರೀಕೃತವಾಗಿತ್ತು ಎಂದು ತಿಳಿಸಿದ್ದಾರೆ. ಉಭಯ ನಾಯಕರು ರಷ್ಯಾ-ಭಾರತ ಸಹಕಾರಕ್ಕೆ ಸಂಬಂಧಿಸಿದ ಪ್ರಸ್ತುತ ವಿಷಯಗಳು ಹಾಗೂ ಪ್ರಾದೇಶಿಕ ಮತು ಅಂತಾರಾಷ್ಟ್ರೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದಾರೆ.

<><><><>

ದೆಹಲಿಯಲ್ಲಿ ಯಮುನಾ ನದಿಯ ಮನರಂಜನಾ ರಿವರ್ ಕ್ರೂಸ್ ಸೇವೆಗೆ ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೋವಾಲ್ ಇಂದು ಚಾಲನೆ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಲೆಫ್ಟಿನೆಂಟ್ ಗವರ್ನರ್ ತರಂಜಿತ್ ಸಿಂಗ್ ಸಂಧು ಮತ್ತು ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಉಪಸ್ಥಿತರಿರಲಿದ್ದಾರೆ. ಯಮುನಾ ನದಿಯ ಸೋನಿಯಾ ವಿಹಾರ್-ಜಗತ್‌ಪುರ ನಡುವಿನ ಮಾರ್ಗದಲ್ಲಿ ಈ ಸೇವೆಯನ್ನು

ಅಭಿವೃದ್ಧಿಪಡಿಸಲಾಗಿದೆ. ನದಿಯ ಮೂಲಕ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವುದು ಹಾಗೂ ದೆಹಲಿಯ ನಿವಾಸಿಗಳು ಮತ್ತು ಪ್ರವಾಸಿಗರಿಗೆ ಹೊಸ ಮನರಂಜನಾ ಅನುಭವ ಒದಗಿಸುವುದು ಇದರ ಉದ್ದೇಶವಾಗಿದೆ. ಸೇವೆಯ ಉದ್ಘಾಟನೆಗೆ ಮುನ್ನ ಕಳೆದ ತಿಂಗಳು ಒಳನಾಡು ಜಲಮಾರ್ಗಗಳ ಪ್ರಾಧಿಕಾರ ಮತ್ತು ದೆಹಲಿ ಸರ್ಕಾರದ ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ನೌಕೆಯ ಪ್ರಾಯೋಗಿಕ ಸಂಚಾರವನ್ನು ಯಶಸ್ವಿಯಾಗಿ ನಡೆಸಲಾಗಿದೆ ಎಂದು ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವಾಲಯ ತಿಳಿಸಿದೆ. ಯಮುನಾ ನದಿಯೊಂದಿಗೆ ಸಾರ್ವಜನಿಕರ ಸಂಪರ್ಕವನ್ನು ಹೆಚ್ಚಿಸುವುದರ ಜೊತೆಗೆ, ರಾಷ್ಟ್ರೀಯ ಜಲಮಾರ್ಗದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಬಳಸಿಕೊಳ್ಳಲು ಈ ಯೋಜನೆ ಮಹತ್ವದ ಹೆಜ್ಜೆಯಾಗಿದೆ ಎಂದು ಸಚಿವಾಲಯ ತಿಳಿಸಿದೆ.

<><><><>

ಭಾರತ ಮತ್ತು ಲೆಬನಾನ್ ನಡುವಿನ ಮೊದಲ ವಿದೇಶಾಂಗ ಕಚೇರಿ ಮಟ್ಟದ ಸಮಾಲೋಚನೆ ನವದೆಹಲಿಯಲ್ಲಿ ನಿನ್ನೆ ನಡೆಯಿತು. ಉಭಯ ದೇಶಗಳು ದ್ವಿಪಕ್ಷೀಯ ಸಂಬಂಧಗಳ ಸಮಗ್ರ ಪರಾಮರ್ಶೆ ನಡೆಸಿದ್ದು, ರಾಜಕೀಯ ಮತ್ತು ಭದ್ರತೆ, ಆರ್ಥಿಕ ಹಾಗೂ ಸಾಮಾಜಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಕುರಿತು ಚರ್ಚಿಸಿವೆ. ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಶ್ರೀಪ್ರಿಯಾ ರಂಗನಾಥನ್ ಹಾಗೂ ಲೆಬನಾನ್ ವಿದೇಶಾಂಗ ವ್ಯವಹಾರಗಳು ಮತ್ತು ವಲಸಿಗರ ಸಚಿವಾಲಯದ ಪ್ರಧಾನ ಕಾರ್ಯದರ್ಶಿ ಅಬ್ದೆಲ್ ಸತ್ತಾರ್ ಇಸ್ಸಾ ಅವರು ಸಮಾಲೋಚನೆಯ ಜಂಟಿ ಅಧ್ಯಕ್ಷತೆ ವಹಿಸಿದ್ದರು. ವ್ಯಾಪಾರ ಮತ್ತು ಹೂಡಿಕೆ, ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಹಾಗೂ ಔಷಧ ಕ್ಷೇತ್ರಗಳಲ್ಲಿ ಸಹಕಾರಕ್ಕೆ ಆದ್ಯತೆ ನೀಡಲು ಉಭಯ ದೇಶಗಳು ಒಪ್ಪಿಗೆ ಸೂಚಿಸಿದವು. ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಮತ್ತು ಅಂತಾರಾಷ್ಟ್ರೀಯ ವಿಷಯಗಳ ಬಗ್ಗೆಯೂ ಚರ್ಚಿಸಲಾಯಿತು.

<><><><>

ದೂರಸಂಪರ್ಕ ಜಾಲಗಳ ನಡುವಿನ ಪರಸ್ಪರ ಸಂಪರ್ಕ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ವಿವಿಧ ಸೇವಾದಾರರ ಜಾಲಗಳ ನಡುವೆ ನಿರಂತರ ಸಂವಹನಕ್ಕೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ-ಟ್ರಾಯ್, ದೂರಸಂಪರ್ಕ ಪರಸ್ಪರ ಸಂಪರ್ಕ ನಿಯಮಾವಳಿಗಳಿಗೆ ಮೂರನೇ ತಿದ್ದುಪಡಿಯನ್ನು ಪ್ರಕಟಿಸಿದೆ. ಹೊಸ ನಿಯಮಗಳು ೨೦೨೬ರ ಜನವರಿ ೧ರಿಂದ ಜಾರಿಗೆ ಬರಲಿವೆ. ಪ್ರಸ್ತುತ ಚಾಲ್ತಿಯಲ್ಲಿರುವ ಇ-೧ ಮತ್ತು ಟೈಮ್ ಡಿವಿಷನ್ ಮಲ್ಟಿಪ್ಲೆಕ್ಸಿಂಗ್ ಆಧಾರಿತ ಪೋರ್ಟ್‌ಗಳ ಜೊತೆಗೆ, ಇಂಟರ್ನೆಟ್ ಪ್ರೋಟೋಕಾಲ್ ಆಧಾರಿತ ಪೋರ್ಟ್‌ಗಳಿಗೂ ಶುಲ್ಕ ನಿಗದಿಪಡಿಸುವ ವ್ಯವಸ್ಥೆಯನ್ನು ಈ ತಿದ್ದುಪಡಿ ಪರಿಚಯಿಸಿದೆ. ಹೊಸ ನಿಯಮದಂತೆ, ಒಂದು ಗಿಗಾಬಿಟ್ ಸಾಮರ್ಥ್ಯದ ಐಪಿ ಪೋರ್ಟ್‌ಗೆ ವಾರ್ಷಿಕ ಗರಿಷ್ಠ ೫.೬ ಲಕ್ಷ ರೂಪಾಯಿ ಹಾಗೂ ೧೦ ಗಿಗಾಬಿಟ್ ಸಾಮರ್ಥ್ಯದ ಪೋರ್ಟ್‌ಗೆ ೪೨.೩ ಲಕ್ಷ ರೂಪಾಯಿ ಶುಲ್ಕ ನಿಗದಿಪಡಿಸಲಾಗಿದೆ. ಆದರೆ, ದೂರಸಂಪರ್ಕ ಸೇವಾದಾರರು ಪರಸ್ಪರ ಒಪ್ಪಂದದ ಮೂಲಕ ನಿಗದಿತ ಗರಿಷ್ಠ ಮಿತಿಗಿಂತ ಕಡಿಮೆ ಶುಲ್ಕವನ್ನು ನಿರ್ಧರಿಸಬಹುದಾಗಿದೆ. ಅಲ್ಲದೆ, ಇತರ ಸಾಮರ್ಥ್ಯದ ಪೋರ್ಟ್‌ಗಳಿಗೂ ಪರಸ್ಪರ ಒಪ್ಪಿಗೆಯೊಂದಿಗೆ ಶುಲ್ಕ ನಿಗದಿಪಡಿಸಲು ಅವಕಾಶ ಕಲ್ಪಿಸಲಾಗಿದೆ. ತಾಂತ್ರಿಕ ಪ್ರಗತಿ ಮತ್ತು ದೂರಸಂಪರ್ಕ ಕ್ಷೇತ್ರದ ಬೆಳವಣಿಗೆಗಳಿಗೆ ಅನುಗುಣವಾಗಿ ನಿಯಂತ್ರಣ ವ್ಯವಸ್ಥೆಯನ್ನು ಆಧುನೀಕರಿಸುವುದು ಈ ತಿದ್ದುಪಡಿಯ ಉದ್ದೇಶವಾಗಿದೆ ಎಂದು ಕೇಂದ್ರ ಸಂವಹನ ಸಚಿವಾಲಯ ತಿಳಿಸಿದೆ.

<><><><>

ಭಾರತ-ನ್ಯೂಜಿಲೆಂಡ್ ನಡುವಿನ ಐದು ಪಂದ್ಯಗಳ ಏಕದಿನ ಕ್ರಿಕೆಟ್ ಸರಣಿ ಮೂರನೇ ಪಂದ್ಯ ಹಾಮಿಲ್ಟನ್‌ನ ಸೆಡ್ಡನ್ ಪಾರ್ಕ್‌ನಲ್ಲಿ ಇಂದು ನಡೆಯಲಿದೆ. ಮಳೆಯ ಕಾರಣ ಟಾಸ್ ವಿಳಂಬವಾಗಿದೆ. ಮೊದಲೆರೆಡು ಪಂದ್ಯಗಳನ್ನು ಭಾರತ ಈಗಾಗಲೇ ಗೆದ್ದುಕೊಂಡಿದ್ದು, ಸರಣಿ ಕೈವಶ ಮಾಡಿಕೊಳ್ಳಲು ಇನ್ನು ಒಂದು ಪಂದ್ಯದಲ್ಲಿ ಗೆಲುವು ಸಾಧಿಸುವ ಅಗತ್ಯವಿದೆ.

<><><><>

ಡಿಸೆಂಬರ್‌ನಲ್ಲಿ ನಡೆಯಲಿರುವ ದಕ್ಷಿಣ ಆಫ್ರಿಕಾ ಪ್ರವಾಸಕ್ಕಾಗಿ ಭಾರತ ಮಹಿಳಾ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಎಲ್ಲ ಮೂರು ಮಾದರಿಗಳ ತಂಡಗಳನ್ನು ಪ್ರಕಟಿಸಿದೆ. ಟೆಸ್ಟ್, ಏಕದಿನ ಮತ್ತು ಟಿ-೨೦ ಪಂದ್ಯಗಳಿಗೆ ಸ್ಮೃತಿ ಮಂದಾನ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಪ್ರವಾಸದಲ್ಲಿ ಭಾರತ ತಂಡ ಒಂದು ಟೆಸ್ಟ್, ಮೂರು ಏಕದಿನ ಹಾಗೂ ಮೂರು ಟಿ-೨೦ ಪಂದ್ಯಗಳನ್ನು ಆಡಲಿದೆ. ಡಿಸೆಂಬರ್ ೯ರಂದು ಗೆಬರ್ಹಾದಲ್ಲಿ ಟೆಸ್ಟ್ ಪಂದ್ಯದೊಂದಿಗೆ ಪ್ರವಾಸ ಆರಂಭವಾಗಲಿದೆ. ಏಕದಿನ ಸರಣಿ ಡಿಸೆಂಬರ್ ೧೬ರಂದು ಪಾರ್ಲ್‌ನಲ್ಲಿ ಆರಂಭವಾಗಲಿದ್ದು, ಡಿಸೆಂಬರ್ ೧೯ರಂದು ಕೇಪ್‌ಟೌನ್‌ನಲ್ಲಿ ಮತ್ತು ೨೨ರಂದು ಬ್ಲೂಮ್‌ಫಾಂಟೈನ್‌ನಲ್ಲಿ ಪಂದ್ಯಗಳು ನಡೆಯಲಿವೆ. ಮೂರು ಪಂದ್ಯಗಳ ಟಿ-೨೦ ಸರಣಿ ಡಿಸೆಂಬರ್ ೨೬ರಂದು ಬೆನೋನಿಯಲ್ಲಿ ಆರಂಭವಾಗಲಿದೆ. ದೀಪ್ತಿ ಶರ್ಮಾ ಅವರು ಟೆಸ್ಟ್ ಮತ್ತು ಏಕದಿನ ತಂಡಗಳ ಉಪನಾಯಕಿಯಾಗಿ, ಶಫಾಲಿ ವರ್ಮಾ ಟಿ-೨೦ ತಂಡದ ಉಪನಾಯಕಿಯಾಗಿ ನೇಮಕಗೊಂಡಿದ್ದಾರೆ. ಹರ್ಮನ್‌ಪ್ರೀತ್ ಕೌರ್, ಜೆಮಿಮಾ ರೋಡ್ರಿಗಸ್, ರಿಚಾ ಘೋಷ್, ಯಾಸ್ತಿಕಾ ಭಾಟಿಯಾ, ಸ್ನೇಹ್ ರಾಣಾ ಮತ್ತು ಕ್ರಾಂತಿ ಗೌಡ್ ಟೆಸ್ಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಏಕದಿನ ತಂಡದಲ್ಲಿ ಸ್ನೇಹ್ ರಾಣಾ ಬದಲಿಗೆ ವೈಷ್ಣವಿ ಶರ್ಮಾ ಅವರನ್ನು ಆಯ್ಕೆ ಮಾಡಲಾಗಿದೆ. ೧೭ ಸದಸ್ಯರ ಟಿ-೨೦ ತಂಡದಲ್ಲಿ ಶಫಾಲಿ ವರ್ಮಾ ಸೇರಿದಂತೆ ನಿಕಿ ಪ್ರಸಾದ್, ಜಿ. ಕಾಮಲಿನಿ, ಅನುಷ್ಕಾ ಶರ್ಮಾ, ಪ್ರೇಮಾ ರಾವತ್, ಅಮನ್‌ಜೋತ್ ಕೌರ್, ರೇಣುಕಾ ಸಿಂಗ್ ಠಾಕೂರ್ ಮತ್ತು ಅರುಂಧತಿ ರೆಡ್ಡಿ ಸ್ಥಾನ ಪಡೆದಿದ್ದಾರೆ.

<><><><>

ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ತಮಿಳುನಾಡು, ಪುದುಚೇರಿ ಮತ್ತು ಕಾರೈಕಾಲ್‌ನಲ್ಲಿ ಇಂದು ಭಾರಿ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.  ಮುಂದಿನ ಎರಡು ದಿನಗಳಲ್ಲಿ ಬಿಹಾರ, ನಾಗಾಲ್ಯಾಂಡ್, ಮಣಿಪುರ, ತ್ರಿಪುರಾ ಮತ್ತು ಮಿಜೋರಾಂನಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಅಲ್ಲದೆ ಇಂದು ಕರಾವಳಿ ಆಂಧ್ರಪ್ರದೇಶದಲ್ಲಿ ಬಲವಾದ ಮೇಲ್ಮೈ ಗಾಳಿ ಬೀಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

<>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><>